ದಿಃ17.09.2022ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ. ಎಂ.ಎಂ., ವಕೀಲರಿಂದಃ

1. ಚಾಸಾ.1 ಮೊಹಮ್ಮದ್ ನೂರುಲ್ಲಾ ನನ್ನ ಅಣ್ಣ.

2. ಚಾಸಾ.9 ನನ್ನ ಅತ್ತಿಗೆ.

3. ಚಾಸಾ.16 ರೇಷ್ಮಾ ತಾಜ್ ನನ್ನ ಸ್ವಂತ ತಂಗಿ.

4. ಮಾಗಡಿ ಟೌನ್‌ನಿಂದ ನಮ್ಮ ಊರಾದ ಅಗಲಕೋಟೆ 10 ಕಿಮೀಗಳ ಅಂತರದಲ್ಲಿ ಇರುತ್ತದೆ.

5. ಬೀಬಿ ಆಯೀಷಾ ವಿನ್ನರ್ಸ್ ಶಾಲೆಯಲ್ಲಿ ಓದುತ್ತಿದ್ದಳು.

6. ಆದಿನ ರಾತ್ರಿ 10.30ರ ಸಮಯದಲ್ಲಿ ಚಾಸಾ.16 ಇವಳು ನನಗೆ ಫೋನ್ ಮಾಡಿ ಬೀಬಿ ಆಯೀಷಾ ಕಾಣೆಯಾಗಿದ್ದಾಳೆಂದು ತಿಳಿಸಿರುತ್ತಾಳೆ.

7. ನಂತರ ಸುಮಾರು 10-15 ನಿಮಿಷಗಳಲ್ಲಿಯೇ ನನ್ನ ಅಣ್ಣ ಚಾಸಾ.1 ಸಹ ಫೋನ್ ಮಾಡಿ ಬೀಬಿ ಆಯೀಷಾ ಕಾಣೆಯಾಗಿದ್ದಾಳೆಂದು ತಿಳಿಸಿರುತ್ತಾನೆ.

8. ನಂತರದಲ್ಲಿ 5-10 ನಿಮಿಷಗಳ ಅಂತರದಲ್ಲಿ ಸುಮಾರು 4-5 ಜನ ಫೋನ್ ಮಾಡಿ ತಿಳಿಸಿರುತ್ತಾರೆ.

9. ತಕ್ಷಣವೇ ನಾವು ನಮ್ಮ ಮನೆಯಿಂದ ಹೊರಟು ರಾತ್ರಿ 11.00 ಗಂಟೆಯೊಳಗೆ ಮಾಗಡಿ ಟೌನ್‌ಗೆ ಬಂದಿರುತ್ತೇನೆ.

10. ನಾನು, ಚಾಸಾ.16 ಮತ್ತು ಬೇರೆ ಹೆಣ್ಣುಮಕ್ಕಳು ಸೇರಿಕೊಂಡು ಮಾಗಡಿ ಟೌನ್‌ನ ಬೇರೆ ಬೇರೆ ಬೀದಿಗಳಲ್ಲಿಯೂ ಸಹ ನಾವು ಸದರಿ ಕಾಣೆಯಾಗಿದ್ದ ಬೀಬಿ ಆಯೀಷಾಳನ್ನು ಹುಡುಕಿರುತ್ತೇವೆ.

11. ಮಸೀದಿಗೆ ಹೋಗಿ ಎಷ್ಟು ಗಂಟೆಗೆ ವಿಷಯ ತಿಳಿಸಲಾಗಿತ್ತು ಎಂಬ ವಿಷಯ ಚಾಸಾ.1 ಈತನಿಗೆ ಗೊತ್ತು.

12. ಆದಿನ ರಾತ್ರಿಯೆಲ್ಲಾ ಹುಡುಕಾಡಿರುತ್ತೇವೆ.

13. ಆದಿನ ರಾತ್ರಿ ನಾನು, ಚಾಸಾ.16 ಮತ್ತು ಬೇರೆ ಹೆಣ್ಣು ಮಕ್ಕಳು ಸೇರಿ ಮಾಗಡಿ ಟೌನ್ ಬಿಟ್ಟು ಹೊರವಲಯದಲ್ಲಿಯೂ ಸಹ ಆ ಮಗುವನ್ನು ಹುಡುಕಲು ಹೋಗಿದ್ದೆವು, ಆದರೆ ಸದರಿ ಹೊರವಲಯಗಳ ಹೆಸರು ನನಗೆ ಗೊತ್ತಿಲ್ಲ.

14. ಆದಿನ ರಾತ್ರಿ ಪೊಲೀಸ್ ಠಾಣೆಯ ಒಳಗೆ ನಾನು ಹೋಗದೇ ಹೊರಗೆ ನಿಂತಿದ್ದೆನು.

15. ಆಗ ಸಮಯ ಎಷ್ಟು ಎಂದು ನನಗೆ ಗೊತಿಲ್ಲ.

16. ಸದರಿ ಠಾಣೆಯ ಒಳಗೆ ಚಾಸಾ.1, 16 ಹಾಗೂ ಇನ್ನೂ 4-5 ಹೆಣ್ಣುಮಕ್ಕಳು ಹೋಗಿದ್ದರು.

17. ಠಾಣೆಯ ಒಳಗೆ ಏನು ಮಾತುಕತೆಯಾಗಿರುತ್ತದೆ ಎಂಬುದು ನನಗೆ ಗೊತ್ತಿರುವುದಿಲ್ಲ.

18. ಆದಿನ ರಾತ್ರಿ 1ನೇ ಆರೋಪಿತನು ಚಾಸಾ.1 ಈತನೊಂದಿಗೆ ಎಲ್ಲ ಕಡೆಗೆ ಕಾಣೆಯಾಗಿದ್ದ ಬೀಬಿ ಆಯೀಷಾ ಇವಳಿಗೋಸ್ಕರ ಹುಡುಕಾಟ ಮಾಡಿರುತ್ತಾನೆ ಎನ್ನುವುದು ಸರಿಯಲ್ಲ.

19. ಅದರಂತೆ ಆದಿನ ರಾತ್ರಿ ಚಾಸಾ.1 ಈತನೊಂದಿಗೆ 1ನೇ ಆರೋಪಿತನು ಠಾಣೆಯ ಒಳಗೆ ಪಿರ್ಯಾದನ್ನು ಸಲ್ಲಿಸಲು ಹೋಗಿದ್ದನು ಎನ್ನುವುದು ಸರಿಯಲ್ಲ.

20. ಈಗ ಚಾಸಾ.16 ಸಾಕ್ಷಿ ನುಡಿದು ಹೊರಬಂದ ನಂತರ ಅವಳ ಮಾತು ಕೇಳಿ ನಾನು ಪೊಲೀಸ್ ಠಾಣೆಯ ಒಳಗೆ ಹೋಗಿರಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

21. ಬೀಬಿ ಆಯೀಷಾ ಕಾಣೆಯಾದ ಕ್ಷಣದಿಂದ ಅವಳ ಮೃತದೇಹ ಸಿಗುವವರೆಗೂ 1ನೇ ಆರೋಪಿತನು ಚಾಸಾ.1 ಮತ್ತು ನಮ್ಮೊಂದಿಗೆ ನಿರಂತರವಾಗಿ ಹುಡುಕಲು ಸಹಾಯ ಮಾಡಿರುತ್ತಾನೆ ಎನ್ನುವುದು ಸರಿಯಲ್ಲ.

22. ಆದಿನ ರಾತ್ರಿ ಪೊಲೀಸರು ಪಿರ್ಯಾದನ್ನು ಪಡೆಯದೇ ಇದ್ದ ಕಾರಣ 1ನೇ ಆರೋಪಿತನು ಆ ಪ್ರದೇಶದ ಕೌನ್ಸಿಲರ್

ಈತನಿಗೆ ಫೋನ್ ಮಾಡಿ ಪೊಲೀಸರಿಗೆ ಪಿರ್ಯಾದನ್ನು ಪಡೆಯಲು ಫೋನ್ ಮಾಡಿಸಿರುತ್ತಾನೆ ಎನ್ನುವುದು ಸರಿಯಲ್ಲ.

23. ಮಾರನೇ ದಿನ ಪಿರ್ಯಾದನ್ನು ಸಲ್ಲಿಸಲು ಹೋದಾಗ ನಾನು ಪೊಲೀಸ್ ಠಾಣೆಯಲ್ಲಿ ಸುಮಾರು 30 ಅಡಿಗಳ ಅಂತರದಲ್ಲಿ ನಿಂತಿದ್ದೆನು.

24. ನಾವು ಪಿರ್ಯಾದನ್ನು ಸಲ್ಲಿಸಲು ಮಾರನೇ ದಿನ ಹೋದಾಗ 1ನೇ ಆರೋಪಿತನು ಚಾಸಾ.16 ಇವಳ ಮೊಬೈಲ್ ಫೋನ್‌ಗೆ ಕರೆ ಮಾಡಿದ್ದನು.

25. ಠಾಣೆಯಿಂದ ವಿನ್ನರ್ ಶಾಲೆಗೆ ಹೋಗಿ ಅಲ್ಲಿಂದ 1ನೇ ಆರೋಪಿತನ ಮನೆಗೆ ಹೋದಾಗ ಮಧ್ಯಾಹ್ನ 12.00 ಗಂಟೆ ಆಗಿತ್ತು.

26. ಆ ಸಮಯದಲ್ಲಿ 1ನೇ ಆರೋಪಿತನ ಮನೆಯಲ್ಲಿ 1ರಿಂದ 4ನೇ ಆರೋಪಿತರು, ಅಬ್ದುಲ್ ಶುಕೂರ್ ಮತ್ತು ಶಹಬಾಜ್ ಖಲಂದರ್ ಎನ್ನುವವರು ಇದ್ದರು.

27. ಮೊದಲು ಮಾಟಗಾತಿಯಾದ 2ನೇ ಆರೋಪಿತಳ ಹೆಸರು ಮತ್ತು ಪರಿಚಯ ಇರಲಿಲ್ಲ.

28. 1ನೇ ಆರೋಪಿತನೇ ಅವಳ ಹೆಸರು ಮತ್ತು ಪರಿಚಯ ಹೇಳಿದ ನಂತರ 2ನೇ ಆರೋಪಿತಳ ಕುರಿತು ಗೊತ್ತಾಗಿರುತ್ತದೆ.

29. ಆ ಸಂದರ್ಭದಲ್ಲಿ 1ನೇ ಆರೋಪಿತನ ಮನೆಯ ಒಳಗೆ, ನಾನು, ಚಾಸಾ.16 ಮತ್ತು ಶಬಾನಾ ಉನ್ನಿಸಾ ಹೋಗಿದ್ದೆವು.

30. ನಾನು 8ನೇ ತರಗತಿವರೆಗೆ ಓದಿರುತ್ತೇನೆ.

31. ನನಗೆ ಗಡಿಯಾರದಲ್ಲಿ ಸಮಯ ನೋಡಿ ಹೇಳಲು ಬರುತ್ತದೆ.

32. ಸದರಿ 1ನೇ ಆರೋಪಿತನ ಮನೆಯಲ್ಲಿ ನಾವು ಎಷ್ಟು ಹೊತ್ತು ಇದ್ದೆವು ಎಂದು ನನಗೆ ಗೊತ್ತಿಲ್ಲ.

33. ಆಗ 1ನೇ ಆರೋಪಿತನು ಕಾಣೆಯಾಗಿದ್ದ ಬೀಬಿ ಆಯೀಷಾ ಇವಳು ಮರಳಿ ಬರುವಂತೆ 2ನೇ ಆರೋಪಿಯಿಂದ ಮಾಡಿಸುತ್ತಿರುವುದಾಗಿ ಹೇಳಿರುತ್ತಾನೆ.

34. ನಂತರ 1ನೇ ಆರೋಪಿತನಿಂದ ಪುನಃ ನಾವು ಚಾಸಾ.1 ಈತನ ಮನೆಗೆ ಹೋಗಿ ಅಲ್ಲಿಂದ ಮಹಿಳೆಯರೊಂದಿಗೆ ಪುನಃ ಕಳೆದು ಹೋದ ಮಗುವನ್ನು ಹುಡುಕಲು ಹೋಗಿರುತ್ತೇವೆ.

35. ಕಳೆದುಹೋದ ಆಯೀಷಾ ಇವಳ ದೇಹ ಸಿಕ್ಕಿರುರ್ತದೆಂದು ಯಾರು ಬಂದು ತಿಳಿಸಿರುತ್ತಾರೆಂದು ನನಗೆ ಗೊತ್ತಿಲ್ಲ.

36. ಸಾಕ್ಷಿ ಸ್ವತಃ ನುಡಿಯುತ್ತಾರೆ, ಎಲ್ಲರೂ ಓಡಿ ಹೋಗುತ್ತಿದ್ದುದ್ದರಿಂದ ನಾನೂ ಸಹ ಬುರ್ಖಾ ಹಾಕಿಕೊಂಡು ಹೋಗಿರುತ್ತೇನೆ.

(ಮುಂದಿನ ಪಾಟೀ ಸವಾಲಿಗೆ ಶ್ರೀ. ಎಂ.ಎಂ., ವಕೀಲರು ಸಮಯಾವಕಾಶ ಕೋರಿದ್ದು, ರೂ 500/- ಸಾಕ್ಷಿ ಭತ್ಯೆ ನೀಡುವ ಕರಾರಿನ ಮೇರೆಗೆ ಪಾಟೀ ಸವಾಲನ್ನು ಮುಂದಿನ ದಿನಾಂಕದ ವೇಳೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.